# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730

2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸಬೇಕಾದ ದಿನಾಂಕ : 21-02-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯಾವ ಯೋಜನೆಗಳ ಅಡಿಯಲ್ಲಿ ಮತ್ಸ್ಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿವೆ; ಈ ಯೋಜನೆಗಳ ಧ್ಯೇಯೋದ್ದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಅಡಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. ಈ ಯೋಜನೆಗಳ ಪ್ರಮುಖ ಧ್ಯೇಯೋದ್ದೇಶಗಳು ಕೆಳಗಿನಂತಿವೆ:-<br>1. ಸಮರ್ಥನೀಯ, ಜವಾಬ್ದಾರಿಯುತ ಮತ್ತು ಸಮಾನ ರೀತಿಯಲ್ಲಿ ಮೀನುಗಾರಿಕೆ ಸಾಮರ್ಥ್ಯವನ್ನು ಬಳಸಿಕೊಳ್ಳುವುದು.<br>2. ಮೀನು ಕೃಷಿ ಮತ್ತು ನೀರಿನ ವಿಸ್ತರಣೆ, ತೀವ್ರತೆ, ವೈವಿಧ್ಯೀಕರಣ ಮತ್ತು ಉತ್ಪಾದಕ ಬಳಕೆಯ ಮೂಲಕ ಮೀನು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.<br>3. ಮೌಲ್ಯ ಸರಪಳಿಯ ಆಧುನೀಕರಣ ಮತ್ತು ಬಲಪಡಿಸುವಿಕೆ - ಹಿಡುವಳಿ ನಂತರದ ನಿರ್ವಹಣೆ ಮತ್ತು ಗುಣಮಟ್ಟ ಸುಧಾರಣೆ.<br>4. ಮೀನುಗಾರರು ಮತ್ತು ಮೀನು ಕೃಷಿಕರ ಆದಾಯ ಮತ್ತು ಉದ್ಯೋಗ ಸೃಷ್ಟಿಯನ್ನು ದ್ವಿಗುಣಗೊಳಿಸುವುದು.<br>5. ರಾಜ್ಯದ ಕೃಷಿ ಆಂತರಿಕ ಉತ್ಪನ್ನ ಮತ್ತು ರಫ್ತಿಗೆ ಕೊಡುಗೆಯನ್ನು ಹೆಚ್ಚಿಸುವುದು.<br>6. ಮೀನುಗಾರರಿಗೆ ಮತ್ತು ಮೀನು ಕೃಷಿಕರಿಗೆ ಸಾಮಾಜಿಕ, ಭೌತಿಕ ಮತ್ತು ಆರ್ಥಿಕ ಭದ್ರತೆ ಕಲ್ಪಿಸುವುದು.<br>7. ಉತ್ತಮ ತಳಿಯ ಮೀನುಮರಿಗಳನ್ನು ಉತ್ಪಾದಿಸಿ, ಲಭ್ಯವಿರುವ ಜಲಸಂಪನ್ಮೂಲಗಳಲ್ಲಿ ಹೆಚ್ಚು ಮೀನು ಉತ್ಪಾದನೆ ಮಾಡುವುದು.<br>8. ತಾಂತ್ರಿಕ ಹಾಗೂ ವೈಜ್ಞಾನಿಕ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದು. |
| ಆ) | ರಾಜ್ಯದಲ್ಲಿ ಸಮುದ್ರ ದಿಂದ ಮತ್ತು ಒಳನಾಡು ನೀರಿನಿಂದ ಪ್ರತಿವರ್ಷ ಉತ್ಪಾದನೆ ಯಾಗುವ ಮೀನಿನ ಪ್ರಮಾಣವೆಷ್ಟು; ಕಳೆದ ಮೂರು ವರ್ಷಗಳ ಅಂಕಿಅಂಶಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಸಮುದ್ರದಿಂದ ಮತ್ತು ಒಳನಾಡು ನೀರಿನಿಂದ ಕಳೆದ 3 ವರ್ಷಗಳಲ್ಲಿ ಉತ್ಪಾದನೆಯಾಗಿರುವ ಮೀನಿನ ಪ್ರಮಾಣ ಕೆಳಗಿನಂತಿದೆ:- (see table below) |
| ಇ) | ರಾಜ್ಯದ ಕರಾವಳಿ ಯಲ್ಲಿ ಮೀನುಗಾರಿಕೆ ಬಫರ್ ವಲಯಗಳನ್ನು ಗುರುತಿಸಲಾಗಿದೆಯೇ:; ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು: | ಇಲ್ಲ. |

| ವರ್ಷ | ಮೀನಿನ ಉತ್ಪಾದನೆ (ಮೆಟ್ರಿಕ್ ಟನ್ ಗಳಲ್ಲಿ) | | |
|---|---|---|---|
| | ಕರಾವಳಿ (ಸಮುದ್ರದಿಂದ) | ಒಳನಾಡು | ಒಟ್ಟು |
| 2020-21 | 347064 | 251881 | 598945 |
| 2021-22 | 589124 | 484622 | 1073746 |
| 2022-23 | 730104 | 494843 | 1224947 |

| | | |
|---|---|---|
| ಈ) | ಇಲ್ಲದಿದ್ದಲ್ಲಿ ರಾಷ್ಟ್ರೀಯ ಸಾಗರ ಮತ್ಸ್ಯನೀತಿಯಂತೆ ಸಾಗರದಲ್ಲಿನ ಮತ್ಸ್ಯ ಸಂಪತ್ತು ರಕ್ಷಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕಾರ್ಯಕ್ರಮ ಮತ್ತು ಯೋಜನೆಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಸಾಗರದಲ್ಲಿನ ಮತ್ಸ್ಯಸಂಪತ್ತನ್ನು ರಕ್ಷಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರವು ಈ ಕೆಳಗಿನಂತೆ ಕ್ರಮವಹಿಸಿದೆ:-<br><br>1. ಸಾಂಪ್ರದಾಯಿಕವಲ್ಲದ ಫಿಶ್ ಅಗ್ರಿಗೇಟಿಂಗ್ ಡಿವೈಸಸ್‌ಗಳ ಉಪಯೋಗಕ್ಕೆ ನಿಷೇಧ.<br>2. ಎಲ್ಲಾ ದೋಣಿಗಳ ನೋಂದಣಿ ಮತ್ತು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ.<br>3. ಮೀನುಗಾರರು ಹಿಡಿಯುವ ಪ್ರಮುಖ 19 ಜಾತಿಯ ಮೀನುಗಳಿಗೆ ಕನಿಷ್ಟ ಗಾತ್ರದ ಮಿತಿ ನಿಗದಿಪಡಿಸಲಾಗಿದೆ.<br>4. ಟ್ರಾಲ್ ದೋಣಿಗಳಲ್ಲಿ 35 ಮಿಲಿಮೀಟರ್ ಸ್ಕ್ವಯರ್ ಮೆಶ್ ಕಾಡ್ ಎಂಡ್ ಇರುವ ಬಲೆಗಳ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ.<br>5. ಮೀನಿನ ಸಂತಾನೋತ್ಪತ್ತಿಯನ್ನು ಸಂರಕ್ಷಿಸಲು ಯಾಂತ್ರೀಕೃತ ಮೀನುಗಾರಿಕೆ ಚಟುವಟಿಕೆಗಳನ್ನು ಪ್ರತಿವರ್ಷ ಜೂನ್ 01 ರಿಂದ ಜುಲೈ 31 ರವರೆಗೂ (ಉಭಯ ದಿನಗಳು ಸೇರಿ) ಒಟ್ಟು 61 ದಿನಗಳ ಮೀನುಗಾರಿಕೆ ನಿಷೇಧವನ್ನು ಹೇರಲಾಗುತ್ತಿದೆ ಮತ್ತು ಸದರಿ ಅವಧಿಯಲ್ಲಿ 10 ಹೆಚ್‌ಪಿ ಗಿಂತ ಮೇಲ್ಪಟ್ಟು ಇಂಜಿನ್‌ವುಳ್ಳ ಮೋಟಾರೈಸ್ಡ್ ಮತ್ತು ಯಾಂತ್ರೀಕೃತ ದೋಣಿಗಳ ಬಳಕೆಯನ್ನು ನಿಷೇಧಿಸಿದೆ.<br>6. ಅವೈಜ್ಞಾನಿಕ ಪದ್ಧತಿಯಾದ ಬುಲ್ ಟ್ರಾಲಿಂಗ್, ಬೆಳಕು ಮೀನುಗಾರಿಕೆ, ಚೌರಿ ಹಾಕಿ ಬೊಂಡಾಸ್ ಹಿಡಿಯುವುದನ್ನು ನಿಷೇಧಿಸಿದೆ.<br>7. ಕಾನೂನು ಉಲ್ಲಂಘನೆ ಪ್ರಕರಣಗಳಿಗೆ ಕರ್ನಾಟಕ ಕಡಲು ಮೀನುಗಾರಿಕೆ ನಿಯಂತ್ರಣ ಕಾಯ್ದೆ, 1986ರ ಪ್ರಕಾರ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯದ ಕರಾವಳಿ ಜಿಲ್ಲೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. |

ಸಂಖ್ಯೆ: ಪಸಂಮೀ ಇ-37 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

# ಅನುಬಂಧ

## ಪ್ರಸ್ತುತ 2023-24 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ:

1. **ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು :**

1.1 **ಒಳನಾಡು ಮೀನುಗಾರಿಕೆಅಭಿವೃದ್ಧಿಗಾಗಿ ಸಹಾಯ**

a. ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಮರಿಗಳನ್ನು ಬಿತ್ತನೆ ಮಾಡಲಾಗುತ್ತಿದೆ.

b. ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟುಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನುಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

c. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಹಿನ್ನೀರು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುತ್ತಿದೆ.

d. ಕೆರೆ/ಜಲಾಶಯದ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿಗಳನ್ನು ಸಾಕಾಣಿಕೆ ಮಾಡಲು ಪ್ರತಿ ಹೆಕ್ಟರ್ ಗೆ ರೂ.2.50ಲಕ್ಷ ಸಹಾಯಧನ ನೀಡಲಾಗುತ್ತಿದೆ.

e. ಮೀನಿನ ಮರಿ ಉತ್ಪಾದನೆಯನ್ನು ಹೆಚ್ಚಿಸುವ ಒಂದು ತಂತ್ರವೆಂದರೆ ಮೀನು ಉತ್ಪಾದನೆ/ಸಾಕಣೆ ಕೇಂದ್ರಗಳಲ್ಲಿ ಸೌಲಭ್ಯಗಳ ಉನ್ನತೀಕರಣ (ಆಧುನೀಕರಣ) ಮೂಲಕ ಅಸ್ತಿತ್ವದಲ್ಲಿರುವ ಮೀನು ಸಾಕಣೆ ಸಾಮರ್ಥ್ಯದ ಬಳಕೆಯನ್ನು ಹೆಚ್ಚಿಸುವುದು. ಈ ನಿಟ್ಟಿನಲ್ಲಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣವನ್ನು ಇದೇ ಲೆಕ್ಕಶೀರ್ಷಿಕೆಯಡಿ ಕೈಗೊಳ್ಳಲಾಗುತ್ತಿದೆ.

f. ರಾಜ್ಯದ ಆಯ್ದ ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಪ್ರತಿಕೆ ಜಲವಿಸ್ತೀರ್ಣಕ್ಕೆ ಅನುಗುಣವಾಗಿರೂ.10000/- ಮೌಲ್ಯದ ಮೀನುಮರಿಗಳನ್ನು ಉಚಿತವಾಗಿ ದಾಸ್ತಾನುಮಾಡಿ ಮೀನುಕೃಷಿಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

1.2 **ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ**

a. ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

b. ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್ ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/- ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗುತ್ತಿದೆ.

## 1.3 ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುತ್ತಿದೆ.

## 1.4 ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲಾಗುತ್ತಿದೆ.

## 1.5 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನುತುಂಬಿಕೊಡುವುದು

ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ಪ್ರಸಕ್ತ 2023-24 ನೇ ಸಾಲಿನಿಂದ ಸದರಿ ಯೋಜನೆಯಡಿ ಸಾಲದ ಮಿತಿಯನ್ನು ರೂ.50,000/-ಗಳಿಂದರೂ.3,00,000/-ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## 2. PMMSY-ಪ್ರಧಾನ ಮಂತ್ರಿ ಮತ್ಸ್ಯಸಂಪದಯೋಜನೆ (ಕೇಂದ್ರ ಪುರಸ್ಕೃತ ಯೋಜನೆ)

ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೊಜನೆಯಡಿ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ಅಲಂಕಾರಿಕಾ ಮತ್ತು ಮನರಂಜನಾ ಮೀನುಗಾರಿಕೆ ಅಭಿವೃದ್ಧಿ, ನೂತನ ತಂತ್ರಜ್ಞಾನ ಅಳವಡಿಕೆ, ಹಿಡುವಳಿ ನಂತರದ ಶೀತಲ ಸರಪಳಿ ಮೂಲ ಸೌಕರ್ಯ, ಮೀನು ಆಹಾರ ತಯಾರಿಕಾ ಘಟಕ, ಮೀನುಮಾರುಕಟ್ಟೆಗಳು ಮತ್ತು ಮಾರಾಟ ಮೂಲ ಸೌಕರ್ಯಗಳಿಗೆ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ.40 ರಷ್ಟು ಸಹಾಯಯಧನ ಹಾಗೂ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ. 60 ರಷ್ಟು ಸಹಾಯಯಧನವನ್ನು ನೀಡಲಾಗುತ್ತಿದೆ.

## 3. ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು :

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಆವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3.00 ಲಕ್ಷ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00 ಲಕ್ಷ ಮೀನುಗಾರಿಕೆ ಬಂದರು/ ಇಳಿದಾಣ ಕೇಂದ್ರದಲ್ಲಿ ಕೆಲಸದಲ್ಲಿದ್ದಾಗ ಮರಣ ಹೊಂದಿದಲ್ಲಿ ರೂ.1.00 ಲಕ್ಷ, ಸಮುದ್ರದಲ್ಲಿ ಮೀನುಗಾರಿಕೆಗೆ ಹೋದಾಗ ಅನಾರೋಗ್ಯದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷ ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ 6.00 ಲಕ್ಷ ಪರಿಹಾರ ನೀಡಲಾಗುತ್ತಿದೆ.

4. **ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು:**

ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.

5. **ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ**

2021-22ನೇ ಸಾಲಿನಿಂದ ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋಲೀಟರ್ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸಲಾಗುತ್ತಿದೆ.ಪ್ರಸ್ತುತ 2023-24 ನೇ ಸಾಲಿನಲ್ಲಿ ಮೀನುಗಾರರ ದೋಣಿಗಳಿಗೆ ನೀಡುತ್ತಿರುವ ಡೀಸೆಲ್ ಮಿತಿಯನ್ನು 1.5 ಲಕ್ಷ ಕಿಲೋಲೀಟರ್‌ನಿಂದ 2.00 ಲಕ್ಷ ಕಿಲೋ ಲೀಟರ್ ಗೆ ಹೆಚ್ಚಿಸಲಾಗಿದೆ.

6. **ಮತ್ಸ್ಯಾಶ್ರಯ ಯೋಜನೆ:**

ರಾಜ್ಯ ಸರ್ಕಾರವು 2006-07ನೇ ಸಾಲಿನಿಂದ "ಮತ್ಸ್ಯಾಶ್ರಯ ಯೋಜನೆ"ಯನ್ನು ಪ್ರಾರಂಭಿಸಿದ್ದು, ಇದರ ಅಡಿಯಲ್ಲಿ ವಸತಿ ರಹಿತ ಮೀನುಗಾರರು ಅಥವಾ ವಾಸಿಸಲುಯೋಗ್ಯಮನೆ ಇಲ್ಲದ ಮೀನುಗಾರರಿಗೆ ಪ್ರತಿ ವರ್ಷ ಅನುದಾನ ಲಭ್ಯತೆಯ ಆಧಾರದ ಮೇಲೆ ಮನೆಗಳನ್ನು ಹಂಚಿಕೆಮಾಡಲಾಗುತ್ತದೆ.

7. **ಮೀನುಗಾರರಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)**

**ಅ) ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ**

ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುತ್ತಿದೆ.

**ಆ) ಸಾಮೂಹಿಕ ವಿಮಾ ಯೋಜನೆ:**

ರಾಜ್ಯದ 80,000 ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.500,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.100,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ಹೈದರಾಬಾದ್ ನಲ್ಲಿರುವ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗುತ್ತಿದೆ.

8. **ಮೀನುಗಾರಿಕೆ ಬಂದರುಗಳ ನಿರ್ಮಾಣ: (ಕೇಂದ್ರ ಪುರಸ್ಕೃತಯೋಜನೆ)**

ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿ ಶತ 50ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿ ಶತ 50ರಷ್ಟನ್ನು ಭರಿಸುತ್ತದೆ. ಈಗಾಗಲೇ ಮಂಜೂರಾದ ಯೋಜನೆಗಳು 75:25 ಅನುಪಾತದಲ್ಲಿಯೇ ಮುಂದುವರೆಯುತ್ತದೆ.

9. **ಮೀನುಗಾರಿಕೆಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ:**

ಮೀನುಗಾರಿಕೆ ಇಳಿದಾಣ ಕೇಂದ್ರಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ.

10. **ಮೀನುಗಾರಿಕೆಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ.**

ಈ ಲೆಕ್ಕ ಶೀರ್ಷಿಕೆಯಡಿ ನಬಾರ್ಡ್ ನೆರವಿನೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರಿಕೆ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ, ಶುಚಿಯಾದ ಮೀನುಮಾರುಕಟ್ಟೆಗಳ ನಿರ್ಮಾಣ, ಮೀನು ಮರಿ ಉತ್ಪಾದನಾ ಕೇಂದ್ರಗಳ ಆಧುನೀಕರಣ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

11. **ಮೀನುಗಾರರ ಮಕ್ಕಳಿಗೆ ವಿದ್ಯಾನಿಧಿ ಯೋಜನೆ:**

ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಮೀನುಗಾರರಿದ್ದು, ಮೀನುಗಾರರು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ರೈತರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಶಿಷ್ಯವೇತನ (Scholarship) ಯೋಜನೆ-"ವಿದ್ಯಾನಿಧಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ಜಿಲ್ಲಾ ಪಂಚಾಯತ್ ಯೋಜನೆಗಳು

1. **ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ**

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ ನಿರ್ವಹಣೆ ವೆಚ್ಚ ಮತ್ತು ಇತರ ಸಾಮಗ್ರಿಗಳ ಖರೀದಿಗೆ ಅನುದಾನವನ್ನು ಒದಗಿಸಲಾಗಿದೆ.

2. **ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ**

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,80,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,40,000/- ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.10,000/- ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುತ್ತಿದೆ ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 500 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ.

**3. ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.4,000/- ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30000/- ಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.1,20,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.2,40,000/- ಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

**4.ಪ್ರದರ್ಶನ ಮತ್ತು ತರಬೇತಿ**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುತ್ತಿದೆ ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

XXX